# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 633/2015 ಸಿಡಬ್ಲೂ : 9 ಪಿಡಬ್ಲೂಃ 6

ಪ್ರಮಾಣವಚನ ದಿಃ13-03-2026
ಬೋಧಿಸಲಾಯಿತು

ಹೆಸರು : ಬಾಪುಗೌಡ

ತಂದೆ ಹೆಸರು : ಸಿದ್ದನಗೌಡ ಪಾಟೀಲ್

ವಯಸ್ಸು : 41 ವರ್ಷ

ಉದ್ಯೋಗ : ಪಿ ಐ ಲೋಕಾಯುಕ್ತ ಆದೇಶದಲ್ಲಿರುವವರು

ವಾಸಸ್ಥಳ : ಬೀದರ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 01-10-2014 ರಿಂದ 08-06-2016 ವರೆಗೂ ಸೇಡಂ ಪಿ ಎಸ್ ನಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ27-06-2015 ರಂದು ಚಾ ಸಾ 8 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು, ಪ್ರಕರಣದ ಆರೋಪಿಯಾದ ಆನಂದ್ ಈತನಿಗೆ ದಸ್ತಗಿರಿ ಮಾಡಿ ದಸ್ತಗಿರ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿ.17-07-2015 ರಂದು ಪ್ರಕರಣದ ಪಿರ್ಯಾದು ದಾರರಾದ ಚಾ ಸಾ 1 ರವರ ಸರ್ಕಾರಿ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ಆರೋಪಿತರ ವಿರುದ್ದ ಆರೋಪ ಸಾಬೀತಾಗಿರುವುದರಿಂದ ಅದೇ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ಆರೋಪಿ ಪರ ವಕೀಲರಿಗೆ ಕೂಗಿಸಲಾಗಿ ಗೈರು ಹಾಜರು ಇರುವುದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

ಪ್ರ. ದ. ನ್ಯಾ. ದಂ. ಸೇಡಂ.

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 190/2019 ಸಿಡಬ್ಲೂ : 6 ಪಿಡಬ್ಲೂಃ 3

ಪ್ರಮಾಣವಚನ ಬೋಧಿಸಲಾಯಿತು ದಿಃ 11-03-2026

ಹೆಸರು : ಅಬ್ದುಲ್ ಸತ್ತಾರ್

ತಂದೆ ಹೆಸರು : ಅಬ್ದುಲ್ ಜಬ್ಬಾರ್

ವಯಸ್ಸು : 65 ವರ್ಷ

ಉದ್ಯೋಗ : ನಿವೃತ್ತ ಅಬಕಾರಿ ರಕ್ಷಕ

ವಾಸಸ್ಥಳ : ಮಳಖೇಡ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2013 ರಿಂದ ಸನ್ 2021 ವರೆಗೂ ಚಿತ್ತಾಪುರ ಉಪ ವಿಭಾಗದಲ್ಲಿ ಅಬಕಾರಿ ರಕ್ಷಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವಧಿಯಲ್ಲಿ ದಿಃ21-04-2018 ರಂದು ನಾನು ಕಛೇರಿಯಲ್ಲಿದ್ದಾಗ ನಮ್ಮ ಅಧಿಕಾರಿಗಳು ನನ್ನನ್ನು ಕರೆಯಿಸಿ ಬೆನಕನಳ್ಳಿ ಗ್ರಾಮದಲ್ಲಿ ರಸ್ತೆಯ ಪಕ್ಕದಲ್ಲಿ ಮದ್ಯ ಮಾರಾಟ ಮಾರುತ್ತಿದ್ದಾರೆ ಎಂದು ಬಾತಮಿ ಬಂದಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಚಿತ್ತಾಪುರ ಬಸ್ಸು ಡಿಪೋ ಹತ್ತಿರ ಇಬ್ಬರು ಪಂಚರನ್ನು ಬರ ಮಾಡಿಕೊಂಡು ಸರ್ಕಾರಿ ವಾಹನವನ್ನು ತೆಗೆದುಕೊಂಡು ಘಟನಾ ಸ್ಥಳಕ್ಕೆ ಹೋಗಿ ವಾಹನವನ್ನು ಮರೆಯಾಗಿ ನಿಲ್ಲಿಸಿ ನಾವು ಬರುವ ವಾಹನಗಳನ್ನು ತಪಾಸಣೆ ಮಾಡುವಾಗ ಸ್ವಲ್ಪ ಸಮಯದ ನಂತರ ಒಂದು ದ್ವಿಚಕ್ರವಾಹನ ಬಂದಿದ್ದು ಅದನ್ನು ತಡೆದು ನಿಲ್ಲಿಸಿ ನೋಡಲಾಗಿ ಹಾಗೂ ವಾಹನವನ್ನು ತಪಾಸಣೆ ಮಾಡಲಾಗಿ ಅದರಲ್ಲಿ 90 ಎಂ ಎಲ್ ನ ಓ ಆರ್ ಸಿ ವಿಸ್ಕಿಯ 36 ಟೆಟ್ರಾ ಪ್ಯಾಕೇಟುಗಳು ಇದ್ದವು. ನಂತರ ನಾವು ಮದ್ಯ ಮಾರಾಟಮಾಡಲು ಪರವಾನಗಿ ಬಗ್ಗೆ ಕೇಳಿದಾಗ ಸದರಿಯವನು ಇಲ್ಲ ಎಂದು ಹೇಳಿರುತ್ತಾರೆ. ಕಾಲಾವಕಾಶ ಕೊರತೆ ಇರುವುದರಿಂದ ಸ್ಥಳದಲ್ಲಿಯೇ ಶೋದನಾ ಪತ್ರವನ್ನು ತಯಾರಿಸಿ ಆರೋಪಿಯ ವಾಹನ ಸಂಖ್ಯೆ ಕೆ ಎ 32 ಇ ಬಿ 1314 ನೇದ್ದನ್ನು ಹಾಗೂ ಮು ಮಾನ್ನು ಜಪ್ತಿ ಮಾಡಿಕೊಂಡೆವು. ನಂತರ ಸದರಿ ವ್ಯಕ್ತಿಯ ಹೆಸರನ್ನು ಕೇಳಲಾಗಿ ಸದರಿಯವನ್ನು ತನ್ನ ಹೆಸರು ಬೀರಣ್ಣ ತಂದೆ ರಾಮಲಿಂಗ ಅಂತಾ ತಿಳಿಸಿರುತ್ತಾನೆ. ನಂತರ ಸ್ಥಳದಲ್ಲಿಯೇ ಆರೋಪಿತನಿಗೆ ದಸ್ತಗಿರಿ ಮಾಡಿರಿದ್ದೆವು. ನಂತರ ವಶಕ್ಕೆ ಪಡೆದುಕೊಂಡು ಮು ಮಾ ನಿಂದ 90 ಎಂ ಎಲ್ ನ 1 ಟೆಟ್ರಾ ಪ್ಯಾಕೇಟನ್ನು ರಾಸಾಯನಿಕ ಪರೀಕ್ಷೆ ಕುರಿತು ತೆಗೆದು ಅದಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ ಅದರ ಮೇಲೆ ಇಲಾಖೆಯ ಮುದ್ರೆ ಸಂಖ್ಯೆ 420 ಯಿಂದ ಸೀಲು ಮಾಡಿರುತ್ತೇವೆ. ಸದರಿ ಪಂಚನಾಮೆ ಮಧ್ಯಾಹ್ನ 01-30 ರಿಂದ 02-15 ಗಂಟೆಯವರೆಗೆ ಜರುಗಿಸಿರುಗಿಸಿ

ಮುಗಿಸಲಾಯಿತು. ನಂತರ ದಿ.13-08-2018 ರಂದು ಮಾನ್ಯ ವಿಭಾಗೀಯ ಸಾರ್ವಜನಿಕ ವಿಶ್ಲೇಷಕರು ಹಾಗೂ ಸಹಾಯಕ ರಾಸಾಯನಿಕ ಪರಿಶೀಲಾಧಿಕಾರಿಗಳು ರಾಯಚೂರು ರವರಿಗೆ 90 ಎಂ ಎಲ್ ನ ಒಂದು ಓರಿಜಿನಲ್ ಚಾಯ್ಸ್ ವಿಸ್ಕಿಯ ಟೆಟ್ರಾ ಪಾಕೇಟನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 5 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನಲ್ಲು ನಿ ಪಿ 5(ಎ) ಎಂದು ಗುರುತಿಸಲಾಯಿತು. ನಂತರ ದಿ.18-08-2018 ರಂದು ವಿಶ್ಲೇಷಣಾ ವರದಿಯನ್ನು ತಂದು ಚಾ ಸಾ 3 ರವರಿಗೆ ಒಪ್ಪಿ ಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 6 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ವಿ ಕೆ ಪಿ ವಕೀಲರಿಂದ:

ನಾವು ಯಾವುದೇ ಮು ಮಾ ನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಿಲ್ಲ. ಸುಳ್ಳು ಮು ಮಾ ನ್ನು ಸೃಷ್ಟಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಿಲ್ಲ. ಮು ಮಾ 1 ಸಾಮಾನ್ಯವಾಗಿ ನಮ್ಮ ಇಲಾಖೆಯಲ್ಲಿ ದೋರೆಯುತ್ತವೆ ಎಂದರೆ ಸರಿಯಿಲ್ಲ. ಸಾಕ್ಷಿಯು ಮುಂದುವರೆದು ಬೇರೆ ಅಂಗಡಿಗಳಲ್ಲಿ ಸಿರುತ್ತದೆ ಎಂದು ನುಡಿಯುತ್ತಾರೆ.

(ಈ ದಿನ ಆರೋಪಿತರು ಗೈರು ಹಾಜರಿದ್ದರು ಆರೋಪಿ ಪರ ವಕೀಲರು ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿ ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ವಾದ ಮಂಡಿಸಿರುತ್ತಾರೆ)

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

ಪ್ರ. ದ. ನ್ಯಾ. ದಂ. ಸೇಡಂ.